ಏನು ಮಾಡಿದ್ರೋ?...' ಕೇಳಿದ. ಪ್ರಶ್ನೆಗೆ ತಡವರಿಸಿದ ಸುರೇಶ, 'ಯಾರು ಏನು ಮಾಡಿದ್ದು ಅಣ್ಣ? ನಿಂಗೆ ನೋಡಿದ್ರೆ ಹಿಂಗಾಗಿತ್ತು. ಸಣ್ಣಪ್ರಾಯ, ಹಾಂಗೇ ಕಳೀಲಿಕ್ಕಾಗ್ತದೆಯ? ನಾವೆಲ್ಲ ಯೋಚ್ನೆ ಮಾಡಾಯ್ತು. ಅವಳಪ್ಪ ದೊಡ್ಡಜನ. ಮತ್ತೊಂದು ಮದುವೆ ಆಗದೆ ಅವಳಿಗೆ, ಹಾಳುಬಿದ್ದ ಮನೆಯ ಚಾವಡಿಯಲ್ಲಿ ಕಾಯುತ್ತ ಕುಳಿತ ಹೆಂಗಸೊಬ್ಬಳನ್ನು ನಿರೀಕ್ಷಿಸಿದ್ದೆನಾ ತಾನು? ಕಾಣಿಸದ್ದಕ್ಕೆ ಸಣ್ಣ ನಿರಾಸೆಯಾಗಿದೆಯ? ತನ್ನ ವತ್ಸಲಾ ಮತ್ತೆಲ್ಲೊ ಸುಖವಾಗಿದ್ದಾಳೆ ಅಂತ ಬಿಡುಗಡೆಯ ಸಮಾಧಾನವೆ... ಸಂಕಟವೆ? ಅರ್ಥವಾಗದ ಗೊಂದಲಕ್ಕೆ ಬಿದ್ದ. ಹೊಂಡಕ್ಕೆ ಬಿದ್ದ ತನ್ನ ಮೂವತ್ತಮೂರು ವರ್ಷದ ಆಯುಷ್ಯ ಜೊತೆಗೆ ಏನೇನೆಲ್ಲ ಬಾಚಿಕೊಂಡು ಹೋಗಿದೆ ಎಂಬ ಲೆಕ್ಕಾಚಾರ ವಿಷಾದದಿಂದ ವೇದನೆಗೆ ಹೊರಳಿತು. ಕೇಶವ ಹತ್ತಿರ ಬಂದವ, 'ಅಣ್ಣ ಏಳು ಹೋಗುವ' ಅಂದ. ತಿರುಗಿ ಅದೇ ದಾರಿಯಲ್ಲಿ ಹೆಜ್ಜೆಯೆಳೆಯುವಾಗ, 'ಎಂತದಕ್ಕೆ ಬಂದವರು? ತೆಂಗು ಬೇಕಿತ್ತೊ..ಬಾಳೆ ಬೇಕಿತ್ತೊ?' 'ಪಕ್ಕದ ಮನೆಯ ಕೈಸಾಲೆಯಲ್ಲಿ ನಿತ್ತ ಮುದುಕರು ಸರೀ ಕಾಣದ್ದಕ್ಕೆ ಕನ್ನಡಕವನ್ನು ತೋರುಬೆರಳಿನಲ್ಲಿ ಹುಬ್ಬಿನತ್ತ ತಳ್ಳುತ್ತ ನಿರೀಕ್ಷಿಸುತ್ತಿದ್ದರು. ಅವರ ಗುರುತು ಹಿಡಿದ ಕೇಶವ, 'ಕಾಮತ ಮಾವ, ನಾನು ಕೇಶವ... ಇಂವ ಅಣ್ಣ ಈಶ್ವರ. ಮನೆ ನೋಡ್ಬೇಕು ಅಂದದ್ದಕ್ಕೆ...' ಕಣ್ಣು ಕಿರಿದುಗೊಳಿಸಿ ಏನನ್ನೋ ಜ್ಞಾಪಿಸಿಕೊಂಡವರು ಒಮ್ಮೆಲೆ ಚುರುಕಾಗಿ, 'ಯಾರು ದೇವು ಪತ್ತಾರನ ಮಕ್ಳನೋ, ಬರ್‍ರೋ ಇಲ್ಲಿ. ಗುರ್ತಿಲ್ಲದಾಂಗೆ ಹೋಗತೀರಲ್ರೋ...' ಸ್ವರದಲ್ಲಿಯ ಆತ್ಮೀಯತೆಗೆ ಬಂದಿಯಾದವರಂತೆ ಇಬ್ಬರೂ ಹೋಗಿ ಅವರು ತೋರಿಸಿದಲ್ಲಿ ಆಸೀನರಾದರು. ಅದೂ ಇದೂ ಮಾತಾಡಿದವರು ಈಶ್ವರನಿಗೆ ಒದಗಿದ ಸಂಕಷ್ಟ ನೆನಸಿಕೊಂಡು ಮರುಗುತ್ತ ಈಗ ಗುಣವಾದದ್ದು ಪವಾಡವೇ ಸೈ... ದೇವರು ಕಣ್ಣು ಬಿಟ್ಟ ಅಂತ ಕೈ ಮುಗಿದರು. ಹಿಂದೆ ಇವರ ಮನೆಗಿದ್ದ ಖ್ಯಾತಿಯನ್ನು ಪದೇಪದೇ ನೆನಸಿಕೊಂಡರು. ಥಟ್ಟನೆ ಒಳಗೆ ಹೋಗಿ ಒಂದು ವಸ್ತುವನ್ನು ತಂದು ಇವರೆದುರು ಇಟ್ಟು, 'ಈ ಬೀಗ ಇದೇ ಈಶ್ವರ ಮಾಡಿಕೊಟ್ಟದ್ದು. ಕಾದಿಟ್ಟಿದೇನೆ' ಅಂದರು. ಈಶ್ವರ ಕೈಯಲ್ಲಿ ಅದನ್ನು ಹಿಡಿದು ಸವರುತ್ತ ಭಾವುಕನಾದ. ಆ ಬೀಗಕ್ಕೆ ಎರಡು ಚಾವಿಗಳು. ಎದುರಿನ ಚಾವಿಯನ್ನು ಒಮ್ಮೆ ತಿರುವಿ, ಬೀಗದ ಪಾರ್ಶ್ವದಲ್ಲಿ ಮಾಡಿದ ಮತ್ತೊಂದು ರಂಧ್ರದ ಚಾವಿಯನ್ನು ವಿರುದ್ಧ ದಿಕ್ಕಿನಲ್ಲಿ ತಿರುಗಿಸಬೇಕು. ಆಗ ಎದುರಿನ ಚಾವಿ ಮತ್ತಷ್ಟು ಒಳಗಿಳಿಯುತ್ತದೆ. ಒಳಗೆ ಮತ್ತೆ ತಿರುವಿದರೆ ಬೀಗ ತೆರೆಯುತ್ತದೆ. ತಾನೇ ರೂಪಿಸಿದ್ದು. 'ಕಂಪನಿ ಬೀಗಗಳು ಬಂದು ಎಲ್ಲಾ ಹೋಯ್ತು. ಕುಶಲ ಕೈಗಾರಿಕೆ ಯಾರಿಗೆ ಬೇಕಾಗದೆ? ಈಗ, ಎಲ್ಲಾ ಬೇಗಬೇಗ ದುಡ್ಡು ಬಂದ್ರೆ ಸೈ' ಅಂದ ಕಾಮತರು ಮನೆಯೆಲ್ಲ ಹಾಳು ಬಿಟ್ಟಿದ್ದು ಯಾಕೆ ಅಂತ ಕೇಶವನನ್ನು ತರಾಟೆಗೆ ತೆಗೆದುಕೊಂಡರು. ಸೊಸೆಯನ್ನು ಕರೆದು ಇವರ ಹಿನ್ನೆಲೆಯನ್ನು ಹೊಗಳಿ ಬಾಳೆಹಣ್ಣು ಚಹ ಕೊಡಿಸಿದರು. ಈಶ್ವರನಿಗೆ ಅವರ ಕಾಲುಮುಟ್ಟಿ ನಮಸ್ಕಾರ ಮಾಡಬೇಕು ಅನಿಸಿ, ಮಾಡಿದ. ಮತ್ತೆ ಬನ್ನಿ ಅನ್ನುವ ಮಾತಿಗೆ ತಲೆಯಾಡಿಸುತ್ತ ಇಬ್ಬರೂ ದಾರಿಗೆ ಬಂದರು.

ಹೊನ್ನಾವರದ ತಾರಿಬಾಗಿಲಲ್ಲೆ ಚಂದ್ರು ಕಾಯುತ್ತಿದ್ದ. ಇಬ್ಬರನ್ನೂ ರಿಕ್ಷಾದಲ್ಲಿ ಮೀನುಮಾರ್ಕೆಟ್ ಹಿಂದಿನ ರಸ್ತೆಯ ಮನೆಗೆ ಕರೆದೊಯ್ದ. ಅಲ್ಲಿ ನೋಡಿದರೆ ಶ್ಯಾಮಲ ಆಗಲೆ ಇದ್ದಾಳೆ. 'ನಂಗೆ ತಡೀಲಿಕ್ಕಾಗಲಿಲ್ಲ. ಇಲ್ಲಿಗೇ ಬಂದೆ' ಅಂದಳು ಹನಿಗಣ್ಣಾಗಿ. ಒಬ್ಬರ ಮಾತಿನ ನಡುವೆ ಇನ್ನೊಬ್ಬರು ಮಾತಾಡುತ್ತ ಗದ್ದಲವೊ ಗದ್ದಲ. ಊಟಕ್ಕೆ ಪಾಯಸ. ಚಂದ್ರನ ಹೆಂಡತಿ ಹೊಸರುಚಿ ಅಂತ ಎಂತದೋ ಪಲಾವು ಮಾಡಿದ್ದನ್ನು ಒತ್ತಾಯ ಮಾಡಿ ಬಡಿಸಿದಳು. ಸಂಜೆಯವರೆಗೂ ಶ್ಯಾಮಲ ಮತ್ತು ಕೇಶವ ಈಶ್ವರನ್ನ ಒಂಟಿಯಾಗಿ ಬಿಡದ್ದಕ್ಕೆ ಚಂದ್ರ ಕೊನೆಗೆ ಹೊರಡುವಾಗ, 'ಹಿಂದಿನಾಂಗಲ್ಲ ಈಗ, ಮಕ್ಳನ್ನು ಓದಿಸ್ಬೇಕು. ಈ ಪೇಟೆ ಜೀವನ ತಲೆಗೆ ಎಳೆದ್ರೆ ಕಾಲಿಗಿಲ್ಲ ಕಾಲಿಗೆಳೆದ್ರೆ ತಲೆಗಿಲ್ಲ. ನಿಂಗೆ ಸಂಸಾರದ ಕಷ್ಟ ಇಲ್ಲ, ಅಲ್ಲ... ಹಾಂಗಾಯ್ತು ಅಂತ ಸಂತೋಷ ಅಲ್ಲ ಮಾರಾಯ. ಆಗಬಾರದಿತ್ತು ಏನೋ ಆಯ್ತು. ನಮ್ಮನ್ನ ಮರೀಬ್ಯಾಡ ಅನ್ನೊದಕ್ಕೆ ಅಂದೆ... ಮತ್ತೆ ಫೋನಿನಲ್ಲಿ ಮಾತಾಡ್ತೇನೆ' ಅಂತ ಪರೋಕ್ಷವಾಗಿ ನಿವೇದಿಸಿಕೊಂಡ. ಶ್ಯಾಮಲ ರಾತ್ರಿಗೆ ತಮ್ಮ ಮನೆ ಮುರುಡೇಶ್ವರಕ್ಕೆ ಹಟಮಾಡಿ